ತವರು ಮನೆಗೆ ಹೋಗಿದ್ದಾಳೆ'.

'ಅಬ್ಬಾ ನೀವು ಪೊಲೀಸ್ನವರು ನೇರ ನಮ್ಮ ಮೆದುಳ್ಗೇ ಇಳುದ್ಬಿಡ್ತೀರಪ್ಪ'.

'ಮೊದಲನೇ ಮಗು ಇರಬಹುದಲ್ವಾ?'

'ಹೌದು... ಯು ಗೆಸ್ಡ್ ಇಟ್ ರೈಟ್'.

'ನನ್ನ ಹಣೆಬರಹ ನೋಡಿ... ಇದನ್ನ ಒಂದು ಮದುವೆ ಅನ್ನೋದಾದ್ರೆ, ಮದುವೆ ಆಗಿದೆ ಅಂತ... ಮಕ್ಕಳಾಗೋದಂತೂ ಇಲ್ವೇ ಇಲ್ಲವೇನೋ'.

ಜಾಹ್ನವಿ ತಲೆಯನ್ನು ಪೂರ್ತಿ ಹಿಂದಕ್ಕೆ ಹಾಕಿ, ಮೇಲಿನ ತಾರಸಿಯನ್ನೇ ನಿಟ್ಟಿಸುತ್ತಾ, ಕಣ್ತುಂಬಿಕೊಂಡು ಕಳೆದುಹೋದಂತೆ, ಮೌನವಾಗಿಬಿಟ್ಟಳು. ಭಾವಲೋಕ ಬೆಂದು ಬರಡಾದಾಗ, ದೇಹದ ಹಸಿವು ದಾಹಗಳದೇ ಆಧಿಪತ್ಯ, ಸಂಯಮ ಸಂಕೋಚ ನೇಪಥ್ಯಕ್ಕೆ ಸರಿಯಬೇಕಷ್ಟೇ.

ಮಾಯಣ್ಣನ ಸಾಮೀಪ್ಯಕ್ಕಾಗಿ, ಸಾಂಗತ್ಯಕ್ಕಾಗಿ ಜಾಹ್ನವಿಯ ಹಪಹಪಿ ನಿಚ್ಚಳವಾಗಿತ್ತು. ಮೊದಲನೇ ಭೇಟಿಯಲ್ಲೇ ಈ ಪರಿಯ ಆತುರ, ಅಬ್ಬರ ತೀರಾ ಅಸಹಜವೆನಿಸಿತ್ತು. ಜಾಹ್ನವಿಯೊಡನೆ ಎಷ್ಟು ಅಂತರ ಕಾಯ್ದುಕೊಳ್ಳಬೇಕೆಂಬುದರ ಬಗ್ಗೆ ಮಾಯಣ್ಣನಿಗೆ ಗಲಿಬಿಲಿಯಾಗಿತ್ತು.

'ಸಮಾಧಾನ ಮಾಡ್ಕೊಳಿ' ಎಂದಷ್ಟೇ ಹೇಳಿ ಸುಮ್ಮನಾದ.

'ಜನರೊಂದಿಗೆ ಕಲೆತು ಬೆರೆತು ಬೆಳೆದವಳು ನಾನು, ಈ ಒಂಟಿತನದೊಂದಿಗೆ ಎಂದಿಗೂ ಹೊಂದಿಕೊಳ್ಳಲಾರೆ. ಅದಕ್ಕಾಗಿ ನಾನು ಮೊರೆಹೋದ ವ್ಯಸನಗಳೆಷ್ಟೋ...'

ಮಾಯಣ್ಣನಿಗೆ ಕರ್ತವ್ಯಪ್ರಜ್ಞೆ ಜಾಗೃತವಾಯಿತು.

'ತಪ್ಪು ತಿಳೀಬೇಡಿ, ನಿಮಗೆ ಕೌನ್ಸೆಲಿಂಗ್ ಅಗತ್ಯ ಇದೆ... ನಿಮ್ಮನ್ನು ನೀವೇ ಸಂಭಾಳಿಸಿಕೊಳ್ಳಬೇಕು'.

'ಮಾಯಣ್ಣ ಅವರೆ, ನನಗೆ ಯಾವ ಕೌನ್ಸೆಲಿಂಗೂ ಬೇಡ, ನೀವು ಒಂದು ನನ್ನ ಮಾತಾಡಿಸಿಕೊಂಡು ಹೋಗ್ತಾಯಿದ್ದರೆ ಅಷ್ಟು ಸಾಕು, ನಾನು ನನ್ನ ಸಂತೋಷಾನ ಮತ್ತೆ ಕಂಡುಕೊಳ್ತೀನಿ. ಇದು ನನ್ನ ಫೋನ್ ನಂಬರ್. ಪ್ಲೀಸ್ ಕೀಪ್ ಕಾಲಿಂಗ್ ಮಿ'.

ಜಾಹ್ನವಿಯ ತಲೆಗೆ ಕುಡಿದಿದ್ದ ವೈನ್ ಈಗ ಇನ್ನಷ್ಟು ಏರಿತ್ತೋ ಏನೋ, ಸ್ವಲ್ಪ ಹಾಗೆ ತಟ್ಟಾಡುತ್ತಾ ಮಾಯಣ್ಣನ ಹತ್ತಿರಕ್ಕೆ ಬಂದು ಅವನ ಜೇಬಿಗೆ ಅವಳ ಕಾರ್ಡ್ ಸೇರಿಸಿದ್ದಳು.

'ಇಷ್ಟೊತ್ತಿಗೆ ನಮ್ಮ ಕಾನ್ಸ್ಟೆಬಲ್ ಫೋನ್ ಮಾಡಿ ಬರಬೇಕಿತ್ತಲ್ಲಾ.. ಹೋಗಲಿ ಬಿಡಿ ನಾನೇ ಹೋಗ್ತೀನಿ'.

'ಮುಂದಿನ ಸಾರಿ ನೀವು ಬಂದಾಗ ಐ ವಾಂಟ್ ಟು ಸೀ ಯು ಇನ್ ಕಲರ್ ಡ್ರೆಸ್'.

ಅದಕ್ಕೆ ಉತ್ತರಿಸುವ ಗೋಜಿಗೆ ಹೋಗದೆ ಸುಮ್ಮನೆ ನಕ್ಕು ವಿದಾಯ ಹೇಳಿ ಹೊರಬಿದ್ದಿದ್ದ.

ಸ್ವಲ್ಪ ಯಾಮಾರಿದ್ರೆ ಎನ್ಕ್ವೈರಿ ಮಾಡಲು ಹೋಗಿದ್ದ ಮಾಯಣ್ಣ ತಾನೇ ಎನ್ಕೌಂಟರ್ ಆಗ್ಬಿಡ್ತಿದ್ದ.

ಹೇಗೋ ಸೇಫಾಗಿ ಸ್ಟೇಷನ್ ಸೇರಿಕೊಂಡ ಮಾಯಣ್ಣನ ಟೇಬಲ್ ಮೇಲೆ ತನಿಖೆಗೆ ಸಂಬಂಧಪಟ್ಟಂತಹ ಸಾಕಷ್ಟು ಮೆಟೀರಿಯಲ್

## ಕಳೆದ ಸಂಚಿಕೆಯಲ್ಲಿ



ಅಮ್ಮುವಿನ ಮನೆಯಿಂದ ಠಾಣೆಗೆ ಮರಳುವ ವೇಳೆಗೆ ಮಾಯಣ್ಣ ಹಾಗೂ ಆತನ ಸಿಬ್ಬಂದಿ ದಣಿದಿದ್ದರು. ಆದರೆ, ಹೈ ಪ್ರೊಫೈಲ್ ಕೊಲೆಗೆ ಆದಷ್ಟು ಬೇಗ ತಾರ್ಕಿಕ ಮುಕ್ತಾಯ ಕಂಡುಕೊಳ್ಳಬೇಕಾದ ಅನಿವಾರ್ಯತೆ ಅವರ ಮುಂದಿತ್ತು. ಅಮ್ಮು ಕೊಲೆ ಕೇಸನ್ನು ಮಾಯಣ್ಣ ಸವಾಲಾಗಿ ತೆಗೆದುಕೊಂಡ. ಸಾಕ್ಷ್ಯಗಳನ್ನು ಮತ್ತೆ ಮತ್ತೆ ಮರೆಗೆ ಹಚ್ಚತೊಡಗಿದ. ತನಿಖೆಯ ನಡುವೆಯೇ, ಪ್ರಕರಣಕ್ಕೆ ಸಂಬಂಧಿಸಿದ ಸೂಕ್ಷ್ಮಗಳನ್ನು ತನ್ನ ಸಿಬ್ಬಂದಿಯ ಗಮನಕ್ಕೆ ತರತೊಡಗಿದ. ಅಮ್ಮುವಿನ ಪ್ರಕರಣ ಮಾಯಣ್ಣನ ಸಿಬ್ಬಂದಿಗೆ ಪ್ರಾಯೋಗಿಕ ಪಠ್ಯದಂತೆ ಪರಿಣಮಿಸಿತು. ಶವದ ಪೋಸ್ಟ್‌ಮಾರ್ಟಂ ಮಾಡಿದ ವೈದ್ಯರು, ಕೊಲೆಗೆ ಸಂಬಂಧಿಸಿದ ತಮ್ಮ ಗಮನಕ್ಕೆ ಬಂದ ಅಂಶಗಳನ್ನೆಲ್ಲ ಮಾಯಣ್ಣನ ಗಮನಕ್ಕೆ ತಂದರು. ದೇಹದೊಳಗಡೆ ರಕ್ತಸ್ರಾವ ಆಗಿಲ್ಲದಿರುವುದನ್ನೂ, ಲೈಂಗಿಕ ದೌರ್ಜನ್ಯ ನಡೆದಿಲ್ಲ ಎನ್ನುವುದನ್ನೂ ಖಚಿತಪಡಿಸಿದರು. ಅಮೃತಾಳ ವೃತ್ತಿಜೀವನಕ್ಕೆ ಸಂಬಂಧಿಸಿದ ವಿವರಗಳನ್ನೂ ಪೊಲೀಸರು ಕಲೆಹಾಕತೊಡಗಿದರು.

ಬಂದು ಕೂಡಿಕೊಂಡಿತು. ಫೋರೆನ್ಸಿಕ್ ಫೋಟೊಗ್ರಾಫರ್ ರಾಜೀವ್ ಕ್ರೈಮ್ ಸ್ಪಾಟ್‌ನಲ್ಲಿ ತೆಗೆದ ಫೋಟೋಗಳು, ಡಾಕ್ಟರ್ ಪರಮಶಿವಯ್ಯ ಕಳಿಸಿದ ಮರಣೋತ್ತರ ವರದಿ, ಆಸ್ಪತ್ರೆಯ ಪೋಸ್ಟ್ ಮಾರ್ಟಮ್ ಓಟಿ ಎದುರಿನ ವೇಯ್ಟಿಂಗ್ ಕಾರಿಡಾರ್‌ನ ಸಿಸಿಟೀವಿ ಫುಟೇಜ್ ಪೆನ್ ಡ್ರೈವ್, ಬ್ಲಡ್ ಸ್ಪಾಟರ್ ಅನಲಿಸ್ಟ್ ಮಾದಪ್ಪನವರ ವರದಿ, ಬೆರಳಚ್ಚು ತಜ್ಞ ರಮಣ ಕಳಿಸಿದ ಬಯೊಮೆಟ್ರಿಕ್ ಎವಿಡೆನ್ಸ್ ಫೋಟೊಗಳ ಲಕೋಟೆ... ಹೀಗೆ ಇನ್ನಷ್ಟು ದಾಖಲೆಗಳು ಎಲ್ಲಾ ಸೀಲ್ ಆಗಿ ಬಂದು ಮಾಯಣ್ಣನ ರಾತ್ರಿ ನಿದ್ದೆ ಕದಿಯಲು ಕಾದು ಕುಂತಿತ್ತು.

6

ಅಮ್ಮುವಿನ ಕೊಲೆಯಾಗಿ ನಲವತ್ತೆಂಟು ಗಂಟೆಗಳು ಕಳೆದಿತ್ತು. ತನ್ನ ಮೇಜಿನ ಮೇಲೆ ಜಮೆಯಾಗಿದ್ದ ಎಲ್ಲಾ ವರದಿಗಳನ್ನು, ತಡರಾತ್ರಿಯ ತನಕ, ಕೂಲಂಕಷವಾಗಿ ಓದಿ ಪರಿಶೀಲಿಸಿದ ಮಾಯಣ್ಣನಿಗೆ ಅಮ್ಮುವಿನ ಕೊಲೆ ತನಿಖೆ ಯಾವ ಹಂತದಲ್ಲಿದೆ ಎಂದು ನಿಖರವಾಗಿ ಹೇಳಲು ತಿಳಿಯದಾಗಿತ್ತು. ದಿನ ದಿನಕ್ಕೂ ಈ ಪ್ರಕರಣ ಹೊಸ ಹೊಸ ಆಯಾಮಗಳನ್ನು ಪಡೆಯುತ್ತಾ ಜಟಿಲವಾಗುತ್ತಿತ್ತು.

'ಸಾರ್, ಅಮ್ಮು ಅವರ ಕಾರಲ್ಲಿ ಒಂದು ಕಾಗದ ಸಿಕ್ಕಿದೆ'.

'ಏನ್ ಕಾಗದ ವಿನಯ್?'

'ಅಮ್ಮು ಅವರು ಸಿತಾರ ಅವರಿಗೆ ಬರೆದಿರೋದು'.

'ಹಾಗಾದರೆ ಅದು ಸಿತಾರ ಅವರ ಹತ್ತಿರ ಇರಬೇಕಲ್ವಾ? ಅಷ್ಟಕ್ಕೂ ಈ ಮೊಬೈಲು, ಮೇಯ್ಲ್ ಕಾಲದಲ್ಲಿ ಕಾಗದ ಯಾರ್ರೀ ಬರೀತಾರೆ?'

'ಅದನ್ನ ಪೋಸ್ಟ್ ಮಾಡಬೇಕು ಅಂತ ಬರೆದ ಹಾಗಿಲ್ಲ ಸಾರ್. ಒಂದು ನೋಟ್ ಪ್ಯಾಡ್ ಬುಕ್ ಕೊನೆ ಹಾಳೇಲಿ ಬರೆದಿದ್ದಾರೆ'.

'ಏನಾದ್ರು ಬಾಳ ಮುಖ್ಯವಾದ್ದು ಇದೆಯಾ?'

'ಡೈರೆಕ್ಟರ್ ದಿನೇಶ್ ನಿಜಕ್ಕೂ ಪಾಕಡ ಅನ್ಸುತ್ತೆ ಸಾರ್'.

'ಯಾಕ್ರೀ? ಈಗ ಆ ಕಾಗದದ ಸಾರಾಂಶ ಹೇಳಿ, ಆಮೇಲೆ ನಿಧಾನವಾಗಿ ಓದ್ತೀನಿ'.

'ಏನೋ ಅಪಘಾತದಲ್ಲಿ ಬಲಗೈನ ಬೆರಳುಗಳೆಲ್ಲಾ ಫ್ರಾಕ್ಚರ್ ಆಗಿದೆ ಅಂತ ಪ್ಲಾಸ್ಟರ್ ಹಾಕ್ಕೊಂಡು, ನನಗೆ ಟೈಪ್ ಮಾಡಲು ಆಗಲ್ಲ, ಬರೆಯೋದಕ್ಕೆ ಆಗಲ್ಲ, ಸೀರಿಯಲ್ ಸ್ಕ್ರಿಪ್ಟ್ ಮುಂದುವರೆಸಲು ನಿಮ್ಮ ಸಹಾಯ ಬೇಕು, ಕಾರ್ ಡ್ರೈವ್ ಮಾಡೋಕ್ಕಾಗಲ್ಲ ಡ್ರಾಪ್ ಮಾಡಿ, ಹೀಗೆ ಥರಾವರಿ ನಾಟಕ ಆಡಿ, ಏನೇನೊ ಸಿಚುಯೇಷನ್ಸ್ ಕ್ರಿಯೇಟ್ ಮಾಡಿ, ಅಮ್ಮು ಅವರನ್ನ, ಕೆಲವು ಬಾರಿ ಅವನ ಮನೆಗೆ ಬರೋ ಹಾಗೆ ಮಾಡಿದ್ದಾನೆ. ಅಮ್ಮು ಅವನ ಮನೇಲಿ ಅಡುಗೆ ಮಾಡಿದ, ಅವನ ಶರ್ಟಿಗೆ ಗುಂಡಿ ಹಾಕಿದ, ಅವನಿಗೆ ಚಮಚದಲ್ಲಿ ಪಾನಿಪುರಿ ತಿನ್ನಿಸಿದ, ಸಿಂಕಲ್ಲಿ ಲೋಟ ತೊಳೆದ, ಅವನ ಮನೆ ಕನ್ನಡಿಯಲ್ಲಿ ತಲೆ ಬಾಚಿಕೊಂಡ, ಅಷ್ಟೇ ಅಲ್ಲ, ಯಾವಾಗಲೋ ಸೋಫಾ ಮೇಲೆ ಹಾಗೆ ಸುಸ್ತಾಗಿ ಚಾಚಿಕೊಂಡು ಕಣ್ಣುಮುಚ್ಚಿಕೊಂಡ ಒಂದು ಕ್ಷಣ... ಎಲ್ಲಾ ಮೊಬೈಲ್‌ನಲ್ಲಿ ಸೆರೆಹಿಡಿದು ಅವನ ಮೊಬೈಲ್‌ನಲ್ಲಿ ಸ್ಟೇಟಸ್ ಮಾಡಿಕೊಂಡು, ಎಲ್ಲರಿಗೂ, ಅದರಲ್ಲೂ ಜಯಂತ್‌ಗೆ, ಅಮ್ಮು ಇವನ ಮನೇಲೇ ಸೆಟಲ್ ಆಗಿ ಒಟ್ಟಿಗೆ ಇದ್ದಾರೆ ಅನ್ನೋ ಇಂಪ್ರೆಷನ್ ಕ್ರಿಯೇಟ್ ಮಾಡಿದ್ದಾನೆ. ಮೊದಲೇ ಮತ್ತೊಂದು ವಿಷಯಕ್ಕೆ ತುಸು ಹಳಸಿದ್ದ ಅಮ್ಮು ಮತ್ತು ಜಯಂತ್ ಸಂಬಂಧಾನ ಹೆಚ್ಚು ಕಡಿಮೆ ಪೂರ್ತಿ ಕೆಡವಿ ಹಾಕಿದ್ದಾನೆ. ಇದೆಲ್ಲಾ ಅಮ್ಮು ಕಣ್ಣಿಗೆ ಬೀಳೋದಕ್ಕೆ ಮುಂಚೆ, ಅವರ ಮೈಮೇಲೆ ಕೈಹಾಕಿ ಮಿಸ್ ಬಿಹೇವ್ ಮಾಡಿ ಅವರಿಂದ ಕಪಾಳಕ್ಕೆ ಹೊಡೆಸ್ಕೊಂಡಿದ್ದಾನೆ. ಆಮೇಲೆ ಜಯಂತ್ ಫೋನ್ ಮಾಡಿ ಅಮ್ಮು ಮೇಲೆ ಕೂಗಾಡಿದ್ಮೇಲೇನೆ ಅಮ್ಮುಗೆ ಈ ಸ್ಟೇಟಸ್ ಫೋಟೊ ಹುನ್ನಾರ ಅರ್ಥ ಆಗಿರೋದು.

'ಮತ್ತೆ ಅಮ್ಮು ಇವನನ್ನು ತರಾಟೆಗೆ ತಗೊಂಡು,